ಕನ್ನಡ ಮತ್ತು ಇಂಗ್ಲಿಷ್ ಸಾಹಿತ್ಯವನ್ನು ಓದಿಕೊಂಡಿರುವ ಶ್ರೀಧರ ಬಳಗಾರ ಕಥೆಗಾರರಾಗಿ ಮತ್ತು ಕಾದಂಬರಿಕಾರರಾಗಿ ಗುರುತಿಸಿಕೊಂಡವರು. ಕುಮಟಾದ ಕಮಲಾ ಬಾಳಿಗಾ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ಪ್ರಸ್ತುತ ನಿವೃತ್ತರಾಗಿದ್ದಾರೆ.ಅವರು ಬರೆದ ಕಥೆಗಳು ಇಂಗ್ಲಿಷ್, ತಮಿಳು ಮತ್ತು ಹಿಂದಿ ಭಾಷೆಗೆ ಅನುವಾದಗೊಂಡಿವೆ. ಎರಡು ಬಾರಿ ಕರ್ನಾಟಕಸಾಹಿತ್ಯ ಅಕಾಡೆಮಿಪ್ರಶಸ್ತಿ ಪಡೆದಿದ್ದು, ತಮ್ಮ ಸಾಹಿತ್ಯ ಸಾಧನೆಗಾಗಿ ಅನೇಕ ಸಂಘ ಸಂಸ್ಥೆಗಳ ಗೌರವ ಪುರಸ್ಕಾರಗಳನ್ನೂ ಪಡೆದಿದ್ದಾರೆ. ಮೂಲತಃ ಯಲ್ಲಾಪುರ ಬಳಿಯ ಬಳಗಾರದವರು.

ಕಾಲಿನ, ಎಣ್ಣೆ ಚೀಲದಂತ ಚರ್ಮದ ನೀನು ಕುರೂಪಿಯಾಗಿದ್ದೆ. ಮದುವೆಯಾಗಿ ಹೊರಟಿದ್ದ ಗೆಳತಿ ನಿನ್ನ ಅನುಪಾನವನ್ನು ಋತುಗೆ ವಹಿಸಿದಳು. ಹೂಬುಟ್ಟಿಯಲ್ಲಿಟ್ಟು ತಂದ ನಿನ್ನನ್ನು ಮುಟ್ಟಲು ನಮಗೆ ಅಸಹ್ಯವೆನಿಸಿತ್ತು. ಅನಾಥೆಯಾಗಿದ್ದ ನಿನ್ನನ್ನು ಅವರು ತಾಯಿಯ ಸ್ಥಾನದಲ್ಲಿ ನಿಂತು ಸಾಕಿ ಸಲಹುಹಿದರು. ನಿನಗೆ ಕೊಡುವ ಆಹಾರ, ನೀಡುವ ಕ್ರಮವನ್ನು ಗೂಗಲ್‌ಲ್ಲಿ ಮಾಹಿತಿ ಪಡೆದು ಅಂಗಡಿಯಿಂದ ಧಾನ್ಯದ ಮಿಶ್ರಣವನ್ನು ತಂದು ಪೇಸ್ಟಿನಂತೆ ಕಲಿಸಿ ಬೆರಳಲ್ಲಿ ಚುಂಚನ್ನು ಅಗಲಿಸಿ ಅತ್ಯಂತ ನಾಜೂಕಾಗಿ ಚಮಚೆಯಿಂದ ಗುಟುಕು ಹಾಕುತ್ತಿದ್ದರು. ನಿನಗೆ ರಟ್ಟಿನ ಮನೆ. ಪ್ರಕೃತಿಯ ಬೇರೊಂದು ಜಗತ್ತಿಗೆ ಸೇರಿದ ಜೀವಿಗಳನ್ನು ಪೊರೆಯುವ ಕಷ್ಟ ಅಷ್ಟಿಷ್ಟಲ್ಲ. ಅಪಾರ ಸಂಯಮ ಮತ್ತು ಅನುಕಂಪದಿಂದ ಮಾತ್ರ ಇದು ಸಾಧ್ಯವಿತ್ತು. ನೀನು ಬದುಕುವ ಸಾಧ್ಯತೆಯ ಬಗ್ಗೆ ನಮಗೆ ನಂಬಿಕೆ ಇರಲಿಲ್ಲ. ಅವರು ನಿನ್ನ ಬದುಕಿಸಿದ್ದು ಪವಾಡವೇ.

ಕೆಲಸದ ನಿಮಿತ್ತ ಋತು ಬೆಂಗಳೂರಿಗೆ ಅನಂತರ ಅಮೆರಿಕಾಕ್ಕೆ ಹೋದಳು. ಹೋಗುವಾಗ ನಿನ್ನನ್ನು ಸಲಹುವ ಹೊಣೆಯನ್ನು ನನಗೆ ವರ್ಗಾಯಿಸಿದಳು. ನಿರುಪಾಯನಾಗಿ ನಿನ್ನ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುವಂತಾಯಿತು. ಮಹಡಿಯಲ್ಲಿ ನಿನಗೊಂದು ಪ್ರತ್ಯೇಕ ಕೋಣೆ; ರಟ್ಟಿನ ಪೆಟ್ಟಿಗೆ ನಿನ್ನ ಗೂಡು; ನಮ್ಮ ಮನೆ ಸಾಕು ನಾಯಿ ಮೋನುಗೆ ನಿನ್ನ ಚಲನವಲನದ ಬಗ್ಗೆ ಕುತೂಹಲ. ಡಬ್ಬಿಯಲ್ಲಿಟ್ಟಿರುತ್ತಿದ್ದ ಕಾಳಿನ ಮಿಶ್ರಣ ಆಹಾರಕ್ಕಾಗಿ ನೀನು ಹಾತೊರೆಯುತ್ತಿದ್ದೆ. ನಾನು ಕೋಣೆ ಪ್ರವೇಶಿಸುತ್ತಿದ್ದಂತೆಯೇ ಪುಟ್ಟ ರೆಕ್ಕೆಗಳನ್ನು ಪಟಪಡಿಸಿ ನೀನು ಸ್ಪಂದಿಸಿ ಸಂಭ್ರಮಿಸುತ್ತಿದ್ದೆ. ತಿನ್ನುವ ಚಪಲ ನೋಡಿ ನಿನ್ನ ಬೆಳವಣಿಗೆಯ ವೇಗವನ್ನು ಊಹಿಸಬಹುದಾಗಿತ್ತು. ನಿಧಾನವಾಗಿ ನೀನು ರಟ್ಟಿನ ಪೆಟ್ಟಿಗೆಯ ಪುಟ್ಟ ಅಂತಃಪುರದಿಂದ ಕುಪ್ಪಳಿಸಿ ಜಿಗಿದು ಕೋಣೆಯೊಳಗೇ ಜಗತ್ತನ್ನು ವಿಸ್ತರಿಸಿಕೊಂಡೆ. ನಿನ್ನ ಪಿಷ್ಟಿಯನ್ನು ಬಳಿದು ಸ್ವಚ್ಛಗೊಳಿಸುವ ಮನೆವಾರ್ತೆ ಚಾಕರಿ ನನಗೆ ಅಭ್ಯಾಸವಾಯಿತು. ಆರೋಗ್ಯದ ಕಾರಣಕ್ಕಾಗಿ ನನ್ನ ಹೆಂಡತಿ ನಿನ್ನ ಸಂಪರ್ಕದಿಂದ ಸುರಕ್ಷಿತ ದೂರದಲ್ಲಿರುವಂತೆ ಎಚ್ಚರಿಸುತ್ತಿದ್ದಳು. ನಿನ್ನ ಸಹವಾಸ ನೋಡಿ, 'ನನಗೊಂದು ಸವತಿ ಬಂದಳು' ಎಂದು ನೆರೆಹೊರೆಯವರೊಂದಿಗೆ ತಮಾಷೆ ಮಾಡುತ್ತಿದ್ದಳು. ನೀನು ಗಂಡೊ ಹೆಣ್ಣೊ ನನಗೆ ತಿಳಿದಿರಲಿಲ್ಲ. ಕಲೆಹಾಕಿದ ಮಾಹಿತಿಯ ಪ್ರಕಾರ ದೇಹಗಾತ್ರದಲ್ಲಿ ಚಿಕ್ಕದಿದ್ದರೆ ಹೆಣ್ಣೆಂದು ತಿಳಿಯಿತು; ನೀನು ಆಕಾರದಲ್ಲಿ ಸಣ್ಣದಾಗಿದ್ದೆ.

ರೆಕ್ಕೆಗಳಿಗೆ ಗರಿಮೂಡಿ, ಪುಕ್ಕಗಳು ಗೋಚರಿಸಿದವು; ಗರಿಗಳು ಮತ್ತು ಕೊರಳ ಸುತ್ತಲಿನ ಕೂದಲು ನಸು ನೀಲಿ ಬಣ್ಣದಿಂದ ಮಿಂಚುತ್ತಿದ್ದವು. ನಿನ್ನ ನುಣುಪಿನ ಹಣೆ ಮತ್ತು ಚಂಚಲ ಕಣ್ಣುಗಳು ಮೋಹಕವಾಗಿದ್ದವು. ನಿನ್ನ ವಯ್ಯಾರದ ನಡಿಗೆಗೆ ಮನಸೋಲದಿರಲು ಸಾಧ್ಯವೇ ಇರಲಿಲ್ಲ. ಬೆರಗಿನಿಂದ ಹೊರಗಿನ ಶಬ್ದ ಪ್ರಪಂಚವನ್ನು ಆಲಿಸಲು ತೊಡಗಿದೆ. ನಿನ್ನ ರೂಪಾಂತರ ಬೆಳವಣಿಗೆ ಹಸುಗೂಸಿನ ಲೀಲೆಯಂತೆ ಭಾಸವಾಯಿತು. ವಿಸ್ತಾರವಾದ ನೀಲ ವಿಶ್ವ ನಿನ್ನ ಅರಮನೆ; ಅದನ್ನು ಸೇರುವ ಬಯಕೆ, ಕನಸು ನಿನ್ನ ಚಲನವಲನದಲ್ಲಿ ಪ್ರಕಟವಾಯಿತು. ಈ ವರೆಗೆ ನೀನು ನೋಡಿದ್ದು ನನ್ನನ್ನು ಮಾತ್ರ. ನಿನ್ನ ಕುಲದವರನ್ನು ಕಾಣುವ ಅವಕಾಶ ಪ್ರಾಪ್ತವಾಗಿರಲಿಲ್ಲ. ರೆಕ್ಕೆ ಬಲಿಯುತ್ತಿದ್ದಂತಯೇ ಹೊಸ ಲೋಕ ಆಕಾಶವನ್ನು ಸೇರುವ ತವಕದ ಸಿದ್ಧತೆ ನಿನ್ನ ವರ್ತನೆಯಲ್ಲಿ ಗೋಚರಿಸಿತು. ಜತೆಯಲ್ಲಿ ಹೆತ್ತವರಿದ್ದಿದ್ದರೆ